**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**C.C. No. 3281/2023**

**PW:1**

ದಿಃ **04.12.2024.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿಸವಾಲುಃ ಆರೋಪಿ ಪರ ಶ್ರೀ ಐ ಕೆ ಬಿ ವಕೀಲರಿಂದಃ

ನೀವು ಅನಿಲಕುಮಾರ ಆ್ಯಂಡ ಕಂಪನಿಯಲ್ಲಿ ಪಾಲುದಾರರು ಎಂದು ತೋರಿಸಲು ದಾಖಲೆಯನ್ನು ನೀಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ ನೋಡಬೇಕು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಸಂಸ್ಥೆಯಲ್ಲಿ ನಾನು ಹಾಗೂ ನನ್ನ ಸಹೋದರ ಇಬ್ಬರು ಪಾಲುದಾರರಾಗಿದ್ದೇವೆ. ಸದರಿ ಪಾಲುದಾರ ಸಂಸ್ಥೆಯ ಪಾರ್ಟನರ್ ಶಿಪ್ ಡೀಡ್ ಇರುತ್ತದೆ. ಸದರಿ ಪಾರ್ಟನರ್ ಶಿಪ್ ಸಂಸ್ಥೆಯು ಪಾರ್ಟನರ್ ಶಿಪ್ ಡೀಡ್ ನಲ್ಲಿ ಬರೆದ ಷರತ್ತು ಗಳ ಪ್ರಕಾರ ನಡೆಯುತ್ತದೆ ಎಂದರೆ ಸರಿ. ಸದರಿ ಪಾಲುದಾರಿಕೆ ಸಂಸ್ಥೆ ಒಪರವಾಗಿ ಯಾವದೇ ವ್ಯವಹಾರ ಆದಲ್ಲಿ ಆ ಬಗ್ಗೆ Books of account ಹಾಗೂ IT returns ದಾಖಲೆಗಳಲ್ಲಿ ನಮೂದಿಸಲಾಗುತ್ತದೆ ಎಂದರೆ ಸಾಕ್ಷಿ ಹೌದು ಆದರೆ ಕರಾರುಗಳ ಬಗ್ಗೆ ನಮೂದಿಸಿವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಸಂಸ್ಥೆ ಜೊತೆ ಯಾವೆಲ್ಲ ವ್ಯವಹಾರಗಳು ಆಗಿವೆ ಎಂಬುದರ ಬಗ್ಗೆ ನಮ್ಮ ಪಾಲುದಾರಿಕೆ ಸಂಸ್ಥೆಯ Books of account ಹಾಗೂ IT returns ದಾಖಲೆಗಳಲ್ಲಿ ನಮೂದಸಲಾಗಿದೆ. ನಮ್ಮ ಖಾಸಗಿ ಫಿರ್ಯಾದಿಯಲ್ಲಿ ಅನಿಲಕುಮಾರ ಆ್ಯಂಡ ಕಂಪನಿಯಲ್ಲಿ ಎಷ್ಟು ಜನ ಪಾಲುದಾರರು ಎಂದು ನಮೂದಿಸಿಲ್ಲ ಹಾಗೂ ಸದರಿ ಪಾಲುದಾರರು ಫಿರ್ಯಾದಿದಾರನಾಗಿ ತೋರಿಸಿಲ್ಲ ಎಂದರೆ ಸರಿ.

2. ಆರೋಪಿ ಸಂಸ್ಥೆ ಎಪಿಎಂಸಿ ಯಲ್ಲಿ ಸುಮಾರು 24-25 ವರ್ಷಗಳ ಕಮಿಷನ್ ಆದಾರ ಮೇಲೆ ವ್ಯಾಪಾರ ಮಾಡುತ್ತಿದ್ದಾರೆ ಎಂದರೆ ಸರಿ. ಆರೋಪಿ ಹಾಗೂ ನಮ್ಮ ಸಂಸ್ಥೆ ಮುಂದೆ ಸುಮಾರು 24-25 ವರ್ಷಗಳಿಂದ ವ್ಯವಹಾರ ನಡೆಯುತ್ತಿದೆ ಎಂದರೆ ಸಾಕ್ಷಿ ಇಲ್ಲ ಸುಮಾರು 14-15 ವರ್ಷಗಳಿಂದ ಇರಬಹುದು ಸರಿಯಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಸಂಸ್ಥೆಯವರು ನಮ್ಮ ಕಂಪನಿಗೆ ಕಚ್ಚಾ ಹತ್ತಿ ಹಾಗೂ ಕಮಿಷನ್ ಆದಾರದ ಮೇಲೆ ಮಾರಾಟ ಮಾಡುತ್ತಿದ್ದರು ಎಂದರೆ ಸಾಕ್ಷಿ ಕಮಿಷನ್ ಆದಾರದ ಮೇಲೆ ಅಲ್ಲ ಆದರೆ ನೇರವಾಗಿ ಮಾರಾಟ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಆರೋಪಿಗೆ ವಸ್ತುಗಳನ್ನು ಖರೀದಿಸುವ ಬಗ್ಗೆ ಮುಂಗಡ ಹಣ ನೀಡಿದ ಬಗ್ಗೆ

ದಾಖಲೆಗಳು ನಮ್ಮ ಹತ್ತಿರ ಇವೆ. ಸದರಿ ದಾಖಲೆಗಳನ್ನು ನಾನು ನ್ಯಾಯಾಲಯದಲ್ಲ ಹಾಜರುಪಡಿಸಬಹುದು. ಆರೋಪಿ ನಮ್ಮ ಸಂಸ್ಥೆ ಜೊತೆ ಮಾಡಿದ ವ್ಯವಹಾರದಲ್ಲಿ ನಾವು ಅವರಿಗೆ ಮುಂಗಡ ಹಣ ನೀಡುವ ಪ್ರಮೆಯ ಬರುವುದಿಲ್ಲ ಹಾಗೂ ಆ ರೀತಿ ಯಾವದೇ ಮುಂಗಡ ಹಣವನ್ನು ನಾವು ಆರೋಪಿಗೆ ನೀಡಿಲ್ಲ ಎಂದರೆ ಸರಿಯಲ್ಲ. ನಮ್ಮ ಫಿರ್ಯಾದಿಯಲ್ಲಿ ಆರೋಪಿಗೆ ಈ ರೀತಿ ಮುಂಗಡ ಹಣ ನೀಡಿರುತ್ತದೆ ಎಂದು ನಮೂದಿಸಿಲ್ಲ ಎಂದರೆ ನಿಜ.

3. ದಿಃ 05.09.2020 ರಂದು ಆರೋಪಿಗೆ ರೂ 30,00,000/- ನೀಡಿರುವುದಾಗಿ ನಿಮ್ಮ Books of account ಹಾಗೂ IT returns ದಾಖಲೆಗಳಲ್ಲಿ ಬರೆದಿದೆಯಾ ಎಂದರೆ ಇಲ್ಲ ಸಾಕ್ಷಿ ಮುಂದುವರೆದು ಮುಂಗಡ ಹಣದ ಬಗ್ಗೆ ಸದರಿ ದಾಖಲೆಗಳಲ್ಲಿ ನಮೂದಿಸಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಾವು ಆರೋಪಿಗೆ 30,00,000/- ರೂ ಹಣವನ್ನು ಕಚ್ಚಾವಸ್ತುಗಳ ಖರೀದಿಸುವ ವಿಷಯವಾಗಿ ನೀಡಿರುತ್ತೇವೆ ಎಂದು ದಾಖಲೆಗಳು ಇಲ್ಲ ಆದರೆ ಬ್ಯಾಂಕ್ ಮುಖಾಂತರ ಆರ್ ಟಿ ಜಿ ಎಸ್ ಮಾಡಿರುತ್ತದೆ.

4. ಎಪಿಎಂಸಿ ಯಲ್ಲಿ ಆರೋಪಿ ಅಂಗಡಿಯನ್ನು ಹೊರತುಪಡಿಸಿ ಕಚ್ಚಾ ಹತ್ತಿಯನ್ನು ಮಾರಾಟ ಮಾಡುವ ಸಾಕಷ್ಟು ಅಂಗಡಿಗಳು ಇವೆ ಎಂದರೆ ಸರಿ. ಸದರಿ ಅಂಗಡಿಯವರ ಹತ್ತಿರ ಸಹ ನಾವು ವ್ಯವಹಾರ ಮಾಡುತ್ತೇವೆ. ಅಲ್ಲಿ ಬಹಳಷ್ಟು ಅಂಗಡಿಯವರ ಜೊತೆ ನಾವು ವ್ಯವಹಾರ ಮಾಡುತ್ತೇವೆ ಆ ರೀತಿ ಸುಮಾರು 1000 ಅಂಗಡಿಗಳು ಇವೆ ನನಗೆ ಈಗ ಹೆಸರು ಹೇಳಲು ಆಗುವುದಿಲ್ಲ. ಸದರಿ ಸಾವಿರ ಅಂಗಡಿಗಳ ಪೈಕಿ ವೆಂಕಟೇಶ್ವರ ಟ್ರೆಡರ್ಸ್, ಪಾಟೀಲ ಬ್ರದರ್ಸ್, ಬಿ ಕೆ ಸಾವಕಾರ, ಮುಂತಾದವುಗಳು ಇವೆ. ಸದರಿ ಅಂಗಡಿಯವರಿಗೆ ಮುಂಗಡವಾಗಿ ಹಣ ನೀಡಿದ ಬಗ್ಗೆ ದಾಖಲೆಗಳು ಇವೆಯಾ ಎಂದರೆ ಸಾಕ್ಷಿ ಸದರಿ ಅಂಗಡಿಯವರ ಅಲ್ಲ ಆದರೆ ಬೇರೆಯವರಿಗೆ ಮುಂಗಡ ಹಣ ನೀಡಿದ ಬಗ್ಗೆ ದಾಖಲೆಗಳು ಇವೆ ಅವುಗಳನ್ನು ಹಾಜರುಪಡಿಸಬಹುದು ಎಂದು ನುಡಿಯುತ್ತಾರೆ. ಆರೋಪಿಗೆ ದಿಃ 05.09.2020 ರಂದು 30 ಲಕ್ಷ ಹಣವನ್ನು ಆರ್ ಟಿ ಜಿ ಎಸ್ ಮುಖಾಂತರ ಮುಂಗಡವಾಗಿ ನೀಡಿರುತ್ತೇವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಹಾಗೂ ಆ ರೀತಿ ಯಾವದೆ ಮೊತ್ತವನ್ನು ಅವರಿಗೆ ನೀಡಿಲ್ಲ ಎಂದರೆ ಸರಿಯಲ್ಲ.

5. ಆರೋಪಿ ಸಂಸ್ಥೆಯ ಖಾತೆ ಎಪಿಎಂಸಿ ಕ್ಯಾನರಾ ಬ್ಯಾಂಕನಲ್ಲಿ ಮಾತ್ರ ಇದೆ ಎಂದರೆ ಸಾಕ್ಷಿ ಯುನಿಯನ್ ಬ್ಯಾಂಕನಲ್ಲಿ ಸಹ ಅವರ ಖಾತೆ ಇದೆ ಎಂದು ನುಡಿಯುತ್ತಾರೆ. ಆರೋಪಿ ಸಂಸ್ಥೆಯವರು ಕ್ಯಾನರಾ ಬ್ಯಾಂಕ್ ಹೊರತುಪಡಿಸಿ ಬೇರೆ ಯಾವದೇ ಬ್ಯಾಂಕ ಮುಖಾಂತರ ತಮ್ಮ ವ್ಯವಹಾರ ಮಾಡುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಜೊತೆ ಮುಂಚೆ ಯಾವದೇ ವ್ಯವಹಾರ

ಮಾಡಬೇಕಾದರೆ ನಾವು ಕ್ಯಾನರಾ ಬ್ಯಾಂಕ್ ಮುಖಾಂತರವೇ ಮಾಡುತ್ತಿದ್ದೆವು ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ಅವರು ಮಾಡುತ್ತಿರಬಹುದು ಆದರೆ ನಾವು ಕ್ಯಾನರಾ ಬ್ಯಾಂಕನಲ್ಲಿ ಖಾತೆ ಹೊಂದಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಕ್ಯಾನರಾ ಬ್ಯಾಂಕ ಮುಖಾಂತರ ಮಾತ್ರ ವ್ಯವಹಾರ ಮಾಡುತ್ತಾರೆ ಎಂದರೆ ಸಾಕ್ಷಿ ನಾವು ಯುನಿಯನ್ ಬ್ಯಾಂಕನಲ್ಲಿ ಜಮಾ ಮಾಡಿದ ಮೊತ್ತವನ್ನು ಅವರು ಅದೇ ಬ್ಯಾಂಕನಿಂದ ಪಡೆದುಕೊಂಡಿರುತ್ತಾರೆ.

6. ವ್ಯವಹಾರಿಕ ಸಂಬಂದವನ್ನು ಹೊರತುಪಡಿಸಿ ನನ್ನ ಹಾಗೂ ಆರೋಪಿಯ ಮದ್ಯೆ ಸಂಬಂದ ಚೆನ್ನಾಗಿದೆ ಎಂದರೆ ಸರಿ ಸಾಕ್ಷಿ ಮುಂದುವರೆದು ಸಂಬಂದ ಚೆನ್ನಾಗಿದ್ದ ಕಾರಣವೇ ನಾನು ಅವರಿಗೆ ಹಣ ನೀಡಿದ್ದೆ ಎಂದು ನುಡಿಯುತ್ತಾರೆ. ನಮ್ಮ ಹಾಗೂ ಆರೋಪಿಯ ಮದ್ಯೆ ಜಿ ಎಸ್ ಟಿ ಅಥವಾ ವ್ಯವಹಾರಿಕ ಸಮಸ್ಯೆ ಬಂದರೆ ಒಬ್ಬರಿಗೊಬ್ಬರು ಸಹಾಯ ಮಾಡುತ್ತಿದ್ದೆವು ಎಂದರೆ ಸರಿ. ಆರೋಪಿಗೆ ವ್ಯವಹಾರಿಕ ತೊಂದರೆ ಇದೆ ಎಂದು ಹೇಳಿಕೊಂಡ ಕಾರಣವೇ ನಾನು ಅವರಿಗೆ ಹಣ ನೀಡಿರುತ್ತೇನೆ. ಜುಲೈ 2020 ರ ತನಕ  ನೀವು ಆರೋಪಿಯಿಂದ 70 ಲಕ್ಷಕ್ಕಿಂತ ಹೆಚ್ಚು ಮೊತ್ತದ ವಸ್ತುಗಳನ್ನು ಕ್ರೆಡಿಟ್ ಬ್ಯಾಲನ್ಸ ಇತ್ತು ಎಂದರೆ ಸಾಕ್ಷಿ ಅದನ್ನು ನಾನು ಅವರಿಗೆ ಮರುಪಾವತಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಸದರಿ ಮೊತ್ತದಲ್ಲಿ ಸ್ವಲ್ಪ ಮೊತ್ತವನ್ನು ಹಣದ ರೂಪದಲ್ಲಿ ನೀಡಿರುತ್ತೇನೆ ಅಥವಾ ಇಲ್ಲ ಎಂದು ನನಗೆ ನೆನಪಿಲ್ಲ. ನಮ್ಮ ಟ್ಯಾಕ್ಸ ರಿಟರ್ನ್ಸ ಸಲುವಾಗಿ ನಾನು ಆರೋಪಿಯ ಖಾತೆಗೆ ಹಣ ಜಮಾ ಮಾಡಿ ಅವರಿಂದ ಪುನಃ ಅದನ್ನು ಹಣದ ರೂಪದಲ್ಲಿ ಹಿಂಪಡೆಯುತ್ತಿದ್ದೆನು ಎಂದರೆ ಸರಿಯಲ್ಲ. ಆರೋಪಿ ಸಂಸ್ಥೆಯವರು ಬ್ಯಾಂಕನಿಂದ 30 ಲಕ್ಷ ಪಡೆದುಕೊಂಡೆ ಇಲ್ಲ ಎಂದರೆ ಸರಿಯಲ್ಲ.

7. ನನಗೆ ಪ್ರಬು ಎಂಬ ಹೆಸರಿನಿಂದಲೂ ಸಹ ಕರೆಯತ್ತಾರೆ ಎಂದರೆ ಸರಿ. ಅಣವಿರಪ್ಪ ಅಣವೆಪ್ಪನವರ ನನ್ನ ಸಹೋದರ ಎಂದರೆ ನಿಜ. ಅವರು ನಮ್ಮ ಸಂಸ್ಥೆಯಲ್ಲಿ ಕಾರಕೂನ ಆಗಿ ಕೆಲಸ ಮಾಡುತ್ತಾರೆ. ಸದರಿ ಅಣವಿರಪ್ಪ ಇವರೇ ನಿಮ್ಮ ಬ್ಯಾಂಕಿನ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ಇಲ್ಲ ಅವರು ಚೆಕಗಳನ್ನು ತೆಗೆದುಕೊಂಡು ಹೋಗಿ ಬ್ಯಾಂಕನಲ್ಲಿ ಸಲ್ಲಿಸುತ್ತಿದ್ದರು ಹಾಗೂ ಬ್ಯಾಂಕಿಗೆ ಸಂಬಂದಪಟ್ಟ ನಮ್ಮ ಕೆಲಸಗಳನ್ನು ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಸಾಕ್ಷಿಃಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೊರಿಸಲಾಗಿ ಸಾಕ್ಷಿ ಅದರಲ್ಲಿ ಇರುವ ಸಹಿ ಅಣವಿರಪ್ಪನಿಗೆ ಸೇರಿರುತ್ತದೆ ಎಂದು ಕೇಳಲಾಗಿ ಅದಕ್ಕೆ ಸಾಕ್ಷಿ ನಾನು ಅದನ್ನು ನೋಡಿ ಹೇಳಬೇಕು ಈಗ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ.

ಪಾಟಿಸವಾಲುಃ ಆರೋಪಿ ಪರ ವಕೀಲರು ಮುಂದುವರೆದ ಪಾಟಿಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**(**ಶ್ರೀಮತಿ ದೀಪಾ ಜಿ ಮನೇರಕರ**)**

**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.